## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ವಿಶೇಷ ಮೊಕದ್ದಮೆ ಸಂಖ್ಯೆ:- 816/2021

ಪ್ರಾಸಾಃ- 9 ಚಾಸಾಃ- 19

| | | |
|---|---|---|
| ಸಾಕ್ಷಿಯ ಹೆಸರು | : | ಸಮೀವುಲ್ಲಾ |
| ತಂದೆ/ಗಂಡನ ಹೆಸರು | : | ಗಫೂರ್ ಸಾಬ್ |
| ವಯಸ್ಸು | : | 33 ವರ್ಷ |
| ವೃತ್ತಿ | : | ಫಾಸ್ಟ್ ಫುಡ್ ಸೆಂಟರ್ ಕೆಲಸ |
| ವಾಸಸ್ಥಳ | : | ಸಿರಿಗೇರಿ ಕ್ರಾಸ್ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 7.11.2023

ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ನಾನು ಸಿರಿಗೇರಿ ಕ್ರಾಸ್ ನಲ್ಲಿ ಒಂದು ಫಾಸ್ಟ್ ಫುಡ್ ಸೆಂಟರ್ ಇಟ್ಟುಕೊಂಡು ಜೀವನ ನಿರ್ವಹಿಸುತ್ತಿದ್ದೇನೆ . ಸಾಕ್ಷಿಗೆ ವಿ ಸಿ ಮುಖಾಂತರ 1 ಮತ್ತು 2 ನೇ ಆರೋಪಿತರನ್ನು ತೋರಿಸಲಾಗಿ ನೋಡಿ ಗುರುತಿಸಿರುವುದಿಲ್ಲ . ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ .

1 ಮತ್ತು 2 ರವರನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿಲ್ಲ ಮತ್ತು ಅವರು ನನ್ನ ಅಂಗಡಿಗೆ ಬಂದು ಹೋಗಿರುವ ಬಗ್ಗೆ ನನಗೆ ಗೊತ್ತಿಲ್ಲ . ಪೊಲೀಸರು ಆರೋಪಿ 1 ಮತ್ತು 2 ರವರನ್ನು ನನ್ನ ಅಂಗಡಿಯ ಹತ್ತಿರ ಕರೆದುಕೊಂಡು ಬಂದು ತೋರಿಸಿಲ್ಲ . ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮಿರವರನ್ನು ಹಣಕಾಸಿನ ವಿಚಾರಕ್ಕೆ ಹೊಡೆದು ಕೊಲೆ ಮಾಡಿ ತಾಸಾಪುರ ಕೆನಾಲ್ ಪುರ ಕಾಲುವೆಗೆ ಹಾಕಿದ ವಿಪಷಿಯ ಮತ್ತು ಅವರ ಬಂಗಾರದ ಆಭರಣ ಗಳನ್ನು ತೆಗೆದುಕೊಂಡ ಬಗೆಗ ಕೇಳಿ ತಿಳಿದು ಕೊಂಡು ಪೊಲೀಸರ ಮುದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿಲ್ಲ .

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸ ಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು , ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ ).



<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>

ದಿನಾಂಕಃ 15-6-2021 ರಂದು ಪೊಲೀಸರು ನನ್ನ ಅಂಗಡಿಗೆ ಆರೋಪಿ 1 ಮತ್ತು 2 ರವನ್ನು ಕರೆದುಕೊಂಡು ಬಂದು ತೋರಿಸಿ ನನ್ನನ್ನು ವಿಚಾರಿಸಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಆರೋಪಿ 1 ಮತ್ತು 2 ರವರನ್ನು ಈ ಹಿಂದೆ ಎರಡೂವರೆ ತಿಂಗಳ ರಾತ್ರಿ ಬಿಳಿ ಬಣ್ಣದ ಕಾರಿನಲ್ಲಿ ಬಂದು ಒಳಗೆ ಇಬ್ಬರು ಹೆಣ್ಣು ಮಕ್ಕಳು ಕುಳಿತಿದ್ದು ನನ್ನ ಅಂಗಡಿಯಿಂದ ನಾಲ್ಕು ಎಗ್ ರೈಸ್ ಗಳನ್ನು ತೆಗೆದುಕೊಂಡ ವ್ಯಕ್ತಿಗಳು ಇವರೇ ಎಂದು ಆರೋಪಿ 1 ಮತ್ತು 2 ರವರನ್ನು ಗುರುತಿಸಿದ್ದೆ ಎಂದರೆ ಸರಿಯಲ್ಲ . ಪೊಲೀಸರು ಆರೋಪಿತರ ಹೆಸರು , ವಿಳಾಸ ತಿಳಿಸಿ ಆರೋಪಿತರು ಜಯಮ್ಮ ಮತ್ತು ರಾಮಲಕ್ಷ್ಮಿರವರನ್ನು ಹಣದ ವಿಚಾರಕ್ಕೆ ಅಪಹರಿಸಿ ಕಬ್ಬಿಣದ ರಾಡಿನಿಂದ ಇತರ ಆರೋಪಿತರ ಜೊತೆ ಕೂಡಿ ದಿಃ 21-3-2021 ರಂದು ರಾತ್ರಿ 9-30 ಗಂಟೆಗೆ ತಾಸಾಪುರ ಗ್ರಾಮದ ಕೆನಾಲ್ ಹತ್ತಿರ ಅವರಿಬ್ಬರ ತಲೆಗೆ ಹೊಡೆದು ಸಾಯಿಸಿ ಅವರ ಆಭರಣಗಳನ್ನು ತೆಗೆದುಕೊಂಡು ಕಾಲುವೆಗೆ ಎಸೆದಿದ್ದರು ಎಂದು ಈಗ ಓದಿ ಹೇಳಿದ ನಿಪಿ-41 ರಂತೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ ಹಾಗೂ ದಿನಾಂಕಃ 10-8-2021 ರಂದು ಈಗ ಓದಿ ಹೇಳಿದಂತೆ ನಿಪಿ-42 ರಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ .

ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋತರಿಗೆ ಅನುಕೂಲವಾಗಲು ನನಗೆ ಏನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಆರ್ ಎಸ್ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.